# Activities

## ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ತುಮಕೂರು.

### ರಾಜ್ಯಶಾಸ್ತ್ರ ವಿಭಾಗ

ವಿಷಯ : **"ಹಿರೋಷಿಮಾ, ನಾಗಸಾಕಿ ,ಮೇಲಿನ ಅಣುಬಾಂಬ್ ದಾಳಿ ಒಂದು ಕಾರಾಳ ನೆನಪು"**

ದಿನಾಂಕ 19.08.2014 ರಂದು ನಮ್ಮ ವಿಭಾಗದ ವತಿಯಿಂದ ಏರ್ಪಡಿಸಿದ್ದ **"ಹಿರೋಷಿಮಾ, ನಾಗಸಾಕಿ ,ಮೇಲಿನ ಅಣುಬಾಂಬ್ ದಾಳಿ ಒಂದು ಕಾರಾಳ ನೆನಪು"** ಎಂಬ ವಿಷಯದ ಮೇಲೆ ಸಿ.ಪಿ.ಆರ್ ಪರಿಸರ ಅಧ್ಯಯನ ಸಂಸ್ಥೆಯ ಸಂಯೋಜನಾಧಿಕಾರಿಗಳಿಂದ ಶ್ರೀ.ಎಸ್.ರವಿಶಂಕರ್ ರವರು ಸಚಿತ್ರಗಳೊಂದಿಗೆ (Power Point Presentation) ಅಂದು ಜಪಾನಿನ ಆ ಎರಡು ನಗರಗಳ ಮೇಲೆ ನೆಡೆದ ಅಣುಬಾಂಬ್ ದಾಳಿಯ ಪರಿಣಾಮಗಳ ಬಗ್ಗೆ ಮನ ಮುಟ್ಟುವಂತೆ ವಿವರಿಸಿದಲ್ಲದೆ, ಮುಂದೆ ಆ ರೀತಿಯ ವಿನಾಶಕಾರಿ ಯುದ್ಧಗಳು ಮಾನವನ ಇತಿಹಾಸದಲ್ಲಿ ನಡೆಯದಂತೆ ಮುನ್ನೆಚ್ಚರಿಕೆಯನ್ನು ವಹಿಸುವಲ್ಲಿ ಇಂದಿನ ವಿದ್ಯಾರ್ಥಿಗಳ ಪಾತ್ರದ ಕುರಿತು ಅರಿವನ್ನು ಮೂಡಿಸಿಕೊಟ್ಟಿರುತ್ತಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನಮ್ಮ ಕಾಲೇಜಿನ ಪ್ರಾಚಾರ್ಯರು ಪ್ರೊ.ವಿ.ನಳಿನಾಕ್ಷಿ ರವರು ಮಾತನಾಡುತ್ತಾ ಪ್ರಸ್ತುತ ಕಾರ್ಯಕ್ರಮವು ಇಂದಿನ ಯುವಜನಾಂಗಕ್ಕೆ ಅತುಪಯುಕ್ತವಾದುದಾಗಿದ್ದು ಇಂತಹ ಇನ್ನೂಅನೇಕಾನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕೆಂದರು.

ವಿಭಾಗ ಮುಖ್ಯಸ್ಥರಾದ **ಪ್ರೊ ಪರಶಿವಮೂರ್ತಿ**ಯವರು ಸ್ವಾಗತಿಸಿ, **ಡಾ॥ ಸಣ್ಣಸ್ವಾಮಿ**ಯವರು ನೆರೆದಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.





ದಿ: 12-02-2014

ಗೆ,
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ, ಮೊದಲನೇ ಮಹಡಿ
ವಿಧಾನಸೌಧ,
ಬೆಂಗಳೂರು-560001.

ಮಾನ್ಯರೇ,

ವಿಷಯ:- ವಿಧಾನಸಭಾ ಅಧಿವೇಶನದ ವೀಕ್ಷಣೆಗೆ ಅನುಮತಿ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿನಿಯರಿಗೆ ರಾಜಕೀಯ ವಿದ್ಯಾಮಾನಗಳ ಬಗ್ಗೆ ಪ್ರತ್ಯಕ್ಷ ಅನುಭವ ಮೂಡಿಸುವ ಉದ್ದೇಶ ಹೊಂದಿರುತ್ತೇವೆ. ನಮ್ಮ ಕಾಲೇಜಿನ ವಿದ್ಯಾರ್ಥಿನಿಯರಿಗೆ ವಿಧಾನಸೌಧದಲ್ಲಿ ನಡೆಯುವ ವಿಧಾನಸಭಾ ಅಧಿವೇಶನದ ಕಾರ್ಯಕಲಾಪಗಳನ್ನು ಪರಿಚಯಿಸುವುದು ಶೈಕ್ಷಣಿಕ ಚಟುಚಟಿಕೆಗಳಲ್ಲಿ ಒಂದಾಗಿರುತ್ತದೆ. ಪದವಿ ತರಗತಿಗಳ ವಿದ್ಯಾರ್ಥಿನಿಯರ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ವಿದ್ಯಾರ್ಥಿನಿಯರಿಗೆ ಅಧಿವೇಶನ ನಡೆಯುವ ಗ್ಯಾಲರಿಗೆ ದಿನಾಂಕ: 18-02-2014 ರಂದು ಅಥವಾ ಅಲ್ಲಿನ ವ್ಯವಸ್ಥೆಗೆ ಸೂಕ್ತವೆನಿಸಿದ ಯಾವುದಾದರೂ ಒಂದು ದಿನದಲ್ಲಿ ಪ್ರವೇಶಾವಕಾಶ ಕಲ್ಪಿಸಿಕೊಡಲು ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ಸಂಚಾಲಕರು

ಪ್ರಾಂಶುಪಾಲರು

ಪ್ರತಿ: ಅಂಬೇಡ್ಕರ ವಿಚಾರ ವೇದಿಕೆ.

ಪ್ರತಿಗಳು: 1. ~~ಕಾಲೇಜಿನ ಕಡತ~~
2. ವಿಭಾಗದ ಕಡತ

## ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ತುಮಕೂರು.

### ರಾಜ್ಯಶಾಸ್ತ್ರ ವಿಭಾಗ ಶೈಕ್ಷಣಿಕ ಪ್ರವಾಸದ ವರದಿ

ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದಿಂದ ದಿ.18.02.2014ರಂದು ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿನಿಯರಿಗೆ ವಿಧಾನ ಸಭೆಯ ಅಧಿವೇಶನದ ನಡಾವಳಿಗಳ ಬಗ್ಗೆ ಅರಿವು ಮೂಡಿಸುವುದು ಪ್ರವಾಸದ ಉದ್ದೇಶವಾಗಿತ್ತು. ವಿಭಾಗದ ಉಪನ್ಯಾಸಕರು ಮತ್ತು ವಿದ್ಯಾಥಿನಿಯರು ಬೆಳಿಗ್ಗೆ 7.30ಕ್ಕೆ ಕಾಲೇಜು ಆವರಣದಿಂದ ಎರಡು ಬಸ್ಸುಗಳಲ್ಲಿ ಹೊರಟೆವು.

18.02.2014ರಂದು 11 ಗಂಟೆಗೆ ಬೆಂಗಳೂರು ತಲುಪಿದೆವು. ಮೊದಲಿಗೆ ಸರ್.ಎಂ.ವಿಶ್ವೇಶ್ವರಯ್ಯ ಮ್ಯೂಸಿಯಂ ವೀಕ್ಷಣೆಗೆ ತೆರಳಿದೆವು. ಮ್ಯೂಸಿಯಂನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಅತ್ಯದ್ಬುತ ಮಾಹಿತಿಗಳು ಕುತೂಹಲ ಕೆರಳಿಸಿದವು. ವಿಜ್ಞಾನದ ಪ್ರತಿಯೊಂದು ವಿಭಾಗದ ಮಾಹಿತಿಗಳು ಅಸಕ್ತಿದಾಯಕವಾಗಿದ್ದವು. ಮನರಂಜನಾ ವಿಜ್ಞಾನ ವಿಭಾಗ, ಬಾಹ್ಯಾಕಾಶ ವಿಜ್ಞಾನ ವಿಷಯಗಳು ಆಕರ್ಷಕವಾಗಿದ್ದವು. ತ್ರೀಡಿ ತಂತ್ರಜ್ಞಾನದ ಉಪಕರಣಗಳು ವಿದ್ಯಾರ್ಥಿನಿಯರ ಮನಸೂರೆಗೊಂಡವು. ಸುಮಾರು ಒಂದು ಗಂಟೆ ಸಮಯವನ್ನು ಮ್ಯೂಸಿಯಂ ವೀಕ್ಷಣೆಗೆ ವಿನಿಯೋಗಿಸಿದೆವು.



ಮ್ಯೂಸಿಯಂನಿಂದ 12.30ರ ಸುಮಾರಿಗೆ ವಿಧಾನಸೌಧಕ್ಕೆ ನಡಿಗೆಯ ಮೂಲಕ ತೆರಳಿದೆವು. ಅಧಿವೇಶನ ವೀಕ್ಷಣೆಗೆ ಮೊದಲೇ ಅನುಮತಿಯನ್ನು ಪಡೆದುಕೊಂಡಿದ್ದೆವು. ಅಧಿವೇಶನ ವೀಕ್ಷಿಸಲು ಭದ್ರತಾ ತಪಾಸಣೆ ಕಡ್ಡಾಯವಾಗಿತ್ತು. ಮಾರ್ಷಲ್ ಗಳು ಅಧೀವೇಶನ ವೀಕ್ಷಣೆ ಸಮಯದಲ್ಲಿ ಅನುಸರಿಸುವ ಶಿಸ್ತು ಕ್ರಮಗಳನ್ನು ತಿಳಿಹೇಳಿದರು. ಅಧಿವೇಶನದ ವೀಕ್ಷಣೆಗೆ ಒಂದು ಗಂಟೆಯ ಕಾಲಾವಕಾಶವನ್ನು ನೀಡಿದ್ದರು. ವೀಕ್ಷಕರ ಗ್ಯಾಲರಿಯಲ್ಲಿ ಕುಳಿತು ಅಧಿವೇಶನವನ್ನು ವೀಕ್ಷಿಸಿದೆವು.

ಮಾನ್ಯ ಸ್ಪೀಕರ್ ರವರು ಕಲಾಪವನ್ನು ನಡೆಸುತ್ತಿದ್ದರು. ಶಾಸಕರಾದ ಶಿವಲಿಂಗೇಗೌಡರು ಬಯಲು ಸೀಮೆಯ ನೀರಾವರಿ ಸಮಸ್ಯೆಯನ್ನು ಸದನದ ಮುಂದಿಡುತ್ತಿದ್ದರು. ಅವರು ನಿಗದಿತ ಸಮಯಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡಾಗ ಸ್ಪೀಕರ್ ರವರು ಸಂದೇಶಗಳನ್ನೂ ನೀಡಿದರು. ನಂತರ ಮಾನ್ಯ ಮುಖ್ಯಮಂತ್ರಿಗಳು ನೀರಾವರಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸರಕಾರ ಕೈಗೊಂಡ ಕ್ರಮಗಳನ್ನು ಸ್ಪಷ್ಟಪಡಿಸಿದರು. ಕಾಲಮಿತಿಯ ಅನುಸಾರವಾಗಿ ಅಲ್ಲಿಂದ ನೆಹರೂ ತಾರಾಲಯದ ಆವರಣಕ್ಕೆ ತೆರಳಿದೆವು.



ತಾರಾಲಯದ ಆವರಣದಲ್ಲಿ ಮಧ್ಯಾಹ್ನದ ಊಟ ಮುಗಿಸಿದೆವು. ತಾರಾಲಯದಲ್ಲಿ ಆಕಾಶಕಾಯಗಳ ಬಗ್ಗೆ ತ್ರಿಡಿ ತಂತ್ರಜ್ಞಾನದ ಚಿತ್ರಗಳನ್ನು ವೀಕ್ಷಿಸಿದೆವು. ತಾರಾಲಯದ ಕಾರ್ಯಕ್ರಮವನ್ನು ಮುಗಿಸಿ ಸಂಜೆ 4.30ರ ಸುಮಾರಿಗೆ ಬೆಂಗಳೂರಿನಿಂದ ಹೊರಟೆವು.

ಈ ಶೈಕ್ಷಣಿಕ ಪ್ರವಾಸದ ಜವಾಬ್ದಾರಿಯನ್ನು ವಿಭಾಗದ ಮುಖ್ಯಸ್ಥರಾದ ಪ್ರೊ.ಪರಶಿವಮೂರ್ತಿ, ಹಾಗೂ ಉಪನ್ಯಾಸಕರಾದ ಡಾ.ಸಣ್ಣಸ್ವಾಮಿ, ಕು.ಸಂತೋಷಿ, ಶ್ರೀಮತಿ.ಶಮೀಮರವರು ವಹಿಸಿದ್ದರು. ರಾಜ್ಯಶಾಸ್ತ್ರ ವಿಭಾಗದ 120 ವಿದ್ಯಾರ್ಥಿನಿಯರು ಪ್ರವಾಸದಲ್ಲಿ ಭಾಗವಹಿಸಿದ್ದರು. ಒಟ್ಟಿನಲ್ಲಿ ವಿದ್ಯಾರ್ಥಿನಿಯರಿಗೆ ವಿಧಾನಸಭಾ ಅಧಿವೇಶನದ ಪ್ರಾಯೋಗಿಕ ಮಾಹಿತಿಗಳು ಲಭ್ಯವಾದವು.





"ಕಾನೂನು ಮತ್ತು ಕಾಮನ್ ಸೆನ್ಸ್" (1)

10-03-2017



ಪ್ರಾಂಶುಪಾಲರ ಕೊಠಡಿಯಲ್ಲಿ ಚರ್ಚೆಯ ಕುಶಲೋಪರಿ ನಿರತ ಮುಖ್ಯ ಅತಿಥಿಗಳು.




ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವ ಕು. ಅರ್ಚನಾ.

"ಕಾನೂನು ಮತ್ತು ~~ಕಾನೂ~~ ಕಾಮನ್ ಸೆನ್ಸ್" ೮

10-03-2017




ಕು॥ ಅಕ್ಷತಾರಿಂದ ಅತಿಥಿಗಳಿಗೆ ಸ್ವಾಗತ ಕೋರಿಕೆ.




ವಿಶೇಷ ಉಪನ್ಯಾಸಕರ ಅಧ್ಯಕ್ಷತೆಯನ್ನು ವಹಿಸಿದ್ದ
ಪ್ರಾಂಶುಪಾಲರಿಗೆ ಕು॥ ಸಂತೋಷಿ ರವರಿಂದ ಸ್ವಾಗತ ಕೋರಿಕೆ.

"ಕಾನೂನು ಮತ್ತು ಕಾಮನ್ ಸೆನ್ಸ್"

10-03-2017




ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಆಗಮಿಸಿದ
ಅಭ್ಯಾಗತರ ಪುಷ್ಪಗಳನ್ನು ಸ್ವಾಗತಿಸುತ್ತಿರುವ ಕು॥ ಧನುಶ್ರೀ.




"ಕಾನೂನು ಮತ್ತು ಕಾಮನ್ ಸೆನ್ಸ್" ವಿಷಯದ ಮೇಲೆ
ವಿಚಾರ ಮಂಡಿಸಿದ ಶ್ರೀ ಶೈಲೇಂದ್ರ ನಾಡ್.

"ಕಾನೂನು ಮತ್ತು ಕಾಮನ್ ಸೆನ್ಸ್"

10-03-2017 (4)



ವಿಶೇಷ ಉಪನ್ಯಾಸಕರೊಂದಿಗೆ ಸಂವಾದ ನಿರತ ವಿದ್ಯಾರ್ಥಿನಿಯರು.




ಉಪನ್ಯಾಸ ನೀಡಿದ ಶ್ರೀ ರವೀಂದ್ರನಾಥ್ ರವರಿಗೆ ವಿಭಾಗದ ವತಿಯಿಂದ ಗೌರವ ಸಮರ್ಪಣೆ.

23/03/2017.

ವಿಜಯ ಕರ್ನಾಟಕ - (ತುಮಕೂರು ವಾರ್ತೆ ವಿಭಾಗ)

# ಬಲಾಢ್ಯರ ದೌರ್ಜನ್ಯ ಕಾನೂನಿಗೆ ವಿರುದ್ಧ

**ವಿಕ ಸುದ್ದಿಲೋಕ** ತುಮಕೂರು

ಬಲಾಢ್ಯರು ಸಾಮಾನ್ಯ ಜನರ ಮೇಲೆ ನಡೆಸುವ ದೌರ್ಜನ್ಯ ಕಾನೂನಿಗೆ ವಿರುದ್ಧವಾಗಿದೆ. ಇದು ಗೊತ್ತಿದ್ದರೂ ಕೆಲವು ಬಲಾಢ್ಯ ವ್ಯಕ್ತಿಗಳು ಸಾಮಾನ್ಯ ಜನರ ಮೇಲೆ ದೌರ್ಜನ್ಯ ಮಾಡುತ್ತಿದ್ದು, ಇದು ತಪ್ಪು ಎಂದು ವಕೀಲ ರವೀಂದ್ರನಾಥ ಠಾಕೂರ್ ಹೇಳಿದರು.

ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ, ವಾಣಿಜ್ಯ, ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ರಾಜ್ಯಶಾಸ್ತ್ರ ವಿಭಾಗದಿಂದ ಹಮ್ಮಿಕೊಂಡಿದ್ದ ಕಾನೂನು ಮತ್ತು ಕಾಮನ್‌ಸೆನ್ಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾನವ ತನ್ನ ಹಾಗೂ ತನ್ನವರನ್ನು ಒಂದು ಕಟ್ಟುಪಾಡಿಗೆ ಮತ್ತು ಒಳಿತಿಗಾಗಿ ಮಾಡಿಕೊಂಡಿರುವ ಕಾನೂನು ಸ್ವಯಂ ಕಟ್ಟಳೆಯಾಗಿದೆ. ಹಾಗಾಗಿ ಮನುಷ್ಯನಿಗೆ ಸಾಮಾನ್ಯ ಜ್ಞಾನ ಇಲ್ಲದಿದ್ದರೆ ಅದು ಕಷ್ಟ. ಇಂದಿನ ಯುಗದಲ್ಲಿ ಬಲಾಢ್ಯರು ಸಾಮಾನ್ಯ ಜನರ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದು ನಿಜಕ್ಕೂ ಕಾನೂನಿಗೆ ವಿರುದ್ಧವಾದುದು ಎಂದರು.



ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ, ವಾಣಿಜ್ಯ ಮಹಿಳಾ ಪದವಿ ಪೂರ್ವ ಕಾಲೇಜಿನ ವತಿಯಿಂದ ವಕೀಲ ರವೀಂದ್ರನಾಥ ಠಾಕೂರ್ ಅವರನ್ನು ಅಭಿನಂದಿಸಲಾಯಿತು.

ಇಂದಿನ ದಿನಗಳಲ್ಲಿ ರಾಜಕಾರಣ, ಪೊಲೀಸ್, ಕಾನೂನು, ಮಾಧ್ಯಮ ಇವುಗಳಲ್ಲಿ ಒಡಕು ಇರುವುದರಿಂದ ನಡೆಯಬಾರದ ದುರ್ಘಟನೆ ಹಾಗೂ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಸಮಾಜದಲ್ಲಿ ನ್ಯಾಯ ಕಾಪಾಡುವ ಅಂಗ ಸಂಸ್ಥೆಗಳೇ ತಪ್ಪು ಮಾಡಿದರೆ ಸಮಾಜಕ್ಕೆ ಸಹಾಯ ಮಾಡುವವರು ಯಾರು? ಎಂಬ ಪ್ರಶ್ನೆ ನಮ್ಮನ್ನೆಲ್ಲಾ ಕಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪ್ರಾಂಶುಪಾಲ ಡಾ. ಯೋಗೀಶ್ವರಪ್ಪ ಮಾತನಾಡಿದರು. ರಾಜ್ಯಶಾಸ್ತ್ರ ಮುಖ್ಯಸ್ಥ ಪ್ರೊ.ಪರಶಿವ ಮೂರ್ತಿ, ಪಾವನ ಬಿ.ಎಸ್., ಸಂತೋಷಿ ಎಸ್. ಮುಂತಾದವರಿದ್ದರು.

ಪ್ರಜಾ ಪ್ರಗತಿ - 24/03/2017.



# "ಕಾನೂನು ಮತ್ತು ಕಾಮನ್‌ಸೆನ್ಸ್"- ವಿಶೇಷ ಉಪನ್ಯಾಸ



ತುಮಕೂರು

ಶ್ರೀ ಸಿದ್ದಗಂಗಾ ಮಹಿಳಾ ಪದವಿ ಕಾಲೇಜಿನ ರಾಜ್ಯ ಶಾಸ್ತ್ರ ವಿಭಾಗದ ವತಿಯಿಂದ ನಡೆದ ಕಾನೂನು ಮತ್ತು ಕಾಮನ್‌ಸೆನ್ಸ್ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ವಕೀಲರು ಹಾಗೂ ಯೋಗಪಟುವಾದ ರವೀಂದ್ರನಾಥ ಠಾಕೂರ್ ರವರು ಉಪನ್ಯಾಸ ನೀಡಿದರು

ಕಾನೂನು ಎನುವುದು ಸರಳವಾಗಿ ಹೇಳುವುದಾದರೆ ಮಾನವ ತನ್ನ ಮತ್ತು ತನ್ನವರನ್ನ ಒಂದು ಕಟ್ಟು ಪಾಡಿಗೆ ಮತ್ತು ತನ್ನ ಒಳಿತಿಗಾಗಿ ಮಾಡಿಕೊಂಡ ಸ್ವಯಂ ಕಟ್ಟಳೆಗಳಾಗಿವೆ. ಕಾಮನ್ ಸೆನ್ಸ್ ಎಂದರೆ ಸಾಮಾನ್ಯ ಜ್ಞಾನ ಎನ್ನುವುದು ಗೊತ್ತಿದೆ. ಆದರೆ ಮಾನವ ಇಂದು ಕಾಮನ್‌ಸೆನ್ಸ್‌ಗಿಂತ ಕಾನೂನಿಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾನೆ ಎಂದು ಅಂತರಾಷ್ಟ್ರೀಯ ವಿದ್ಯಮಾನಗಳನ್ನು, ಸ್ಥಳೀಯ ಬೆಳವಣಿಗೆಗಳನ್ನು ಗಮನಿಸಿದರೆ ಕಂಡಿತ ಗೋಚರವಾಗುತ್ತದೆ. ಯಾವ ರಾಷ್ಟ್ರದಲ್ಲಿ ಕಾಮನ್ ಸೆನ್ಸ್ ಇಲ್ಲದ ಪ್ರಜೆಗಳು ಇರುವರು ಅಲ್ಲಿ ಬಹು ಹೆಚ್ಚು ಕಾನೂನುಗಳು ರಚಿಸಲ್ಪಡುತ್ತವೆ. ಕಾರಣ ನೈತಿಕತೆ ಮಟ್ಟ ಕೆಳಮಟ್ಟಲ್ಲಿರುತ್ತದೆ. ಜಾರಿಯೇ ಆಗದ ಕಾನೂನುಗಳು ಬಲಾಢ್ಯರಲ್ಲದವರ ಮೇಲೆ ಪ್ರಯೋಗಿಸಲ್ಪಡುವ ಕಾನೂನು ಎಂದು ಇಂದಿನ ಸ್ಥಿತಿಗೆ ವಿಶ್ಲೇಷಿಸಲ್ಪಡ ಬಹುದಾಗಿದೆ. ಜನಸಾಮಾನ್ಯರು ಮಾಡುವ ಯಾವುದೇ ತಪ್ಪುಗಳಿಗೆ ಕಾನೂನಿನಲ್ಲಿ ಸಾಕ್ಷಿ ಇಲ್ಲದಿದ್ದರೆ ಶಿಕ್ಷೆಗೆ ಗುರಿಪಡಿಸಲಾಗುವುದಿಲ್ಲ ಈ ಸಂಧರ್ಭಗಳಲ್ಲಿ ಸಾಕ್ಷಿಗಳ ಕೊರತೆ ಎದ್ದು ಕಾಣುತ್ತದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆಥಿಜಂದು ಮರು ಪ್ರಶ್ನಿಸುತ್ತಾರೆ ಇಂತಹ ಪ್ರಸಂಗಗಳಲ್ಲಿ ಶ್ರೀ ಸಾಮಾನ್ಯರನ್ನು ಸಂತೈಸುವುದು ಅಸಾಧ್ಯವಾಗಿದೆ. ಹೀಗಾಗಿ ಕಾನೂನು ಒಂದು ಕತ್ತೇ ಯಾರೋ ಎಂದೋ ಹೇಳಿದ್ದನ್ನ ಲಾ ಇಸ್ ಆನ್ ಹ್ಯಾಸ್ ಕಾಮನ್‌ಸೆನ್ಸ್ ಈಸ್ ಎ ಹಾರ್ಸ್ ಎಂದು ಜನರು ನೆನಪಿಸುತ್ತಾರೆ.

ರಾಜಕಾರಣಿ, ಪೋಲೀಸ್ ಕಾನೂನಿನವಾದ ಮಾಡುವ ಅಂಗ ವೈದ್ಯ ಮತ್ತು ಮಾಧ್ಯಮ, ಇವು ಸಮಾಜದಲ್ಲಿ ತಮ್ಮ ಹಿಡಿತ ಸಾಧಿಸಲು ಸ್ಪರ್ಧೆ ಇದ್ದು ಹೊಂದಾಣಿಕೆ ಇಲ್ಲದೆ ಎನೆಲ್ಲಾ ಅನೈತಿಕ ಸ್ಥಿತಿಗಳು ಗೋಚರಿಸುತ್ತವೆ. ಒಂದು ರಾಷ್ಟ್ರದ ಭಾವನೆ ಇನ್ನೊಂದು ರಾಷ್ಟ್ರಕ್ಕೆ ದಕ್ಕೆ ಯಾಗದಂತೆ ಬದುಕುತ್ತಿರುವ ಇಂದಿನ ಕಾಲ ಘಟ್ಟದಲ್ಲಿ ದ್ವೇಷ ಎಂಬುದು ಅನಿವಾರ್ಯವೇ ಎಂಬುದಾಗಿದೆ. ರಾಜರ ಕಾಲದ ಕಾನೂನು ಅದಕ್ಕೂ ಹಿಂದಿನ ಸ್ಥಿತಿಗಳ ನಿಯಮಗಳೂ ಹೀಗೆ ಇತಿಹಾಸದಲ್ಲಿ ಕಾಲಕ್ಕೆ ತಕ್ಕಂತೆ ನಿಯಮ ನೀತಿ ಕಾನೂನುಗಳು ಬದಲಾವಣೆಯನ್ನು ಪಡೆಯುತ್ತಾ ಬಂದಿದೆ. ಅಂದರೆ ಕಾನೂನಿಗೆ ಸಾವಿದೆ ಮುಂದಿನ ಕಾನೂನುಗಳು ಬದಲಾಗಬಹುದು ಆದರೆ ಕಾಮನ್‌ಸೆನ್ಸ್ ಮಾನವೀಯ ನೆಲೆಗಟ್ಟಿನ ಮೇಲೆ ನಿಂತಿದೆ ಹೀಗಾಗಿ ಇದಕ್ಕೆ ಸಾವಿಲ್ಲ ಇದು ಅಮರ ಎಂದು ಅನೇಕ ಉದಾಹರಣೆಗಳ ಮೂಲಕ ಕಾಮನ್ ಸೆನ್ಸ್ ಬಗೆಗಿನ ಅರಿವನ್ನು ಮೂಡಿಸಿದರು ಜೊತೆಗೆ ಕಾನೂನು ಎಂಬುದು ಕೇವಲ ಒಂದು ಕಾಲು ಆದರೆ ಕಾಮನ್‌ಸೆನ್ಸ್ ಎಂಬುದು ಮೂರು ಕಾಲುಗಳಿದ್ದಂತೆ ಎಂದು ಹೋಲಿಕೆ ಮಾಡುತ್ತಾ ಕಾನೂನಿಗಿಂತ ಕಾಮನ್‌ಸೆನ್ಸ್ ಅತಿ ಮುಖ್ಯ ಎಂದು ಅವರ ವಿಚಾರವನ್ನು ಮಂಡಿಸುವ ಮೂಲಕ ಕಾಮನ್ ಸೆನ್ಸ್ ಬಗೆಗಿನ ಪ್ರಾಮುಖ್ಯತೆಯನ್ನು ಎತ್ತಿಹಿಡಿದರು ಪ್ರಾಂಶುಪಾಲರಾದ ಡಾ. ಯೋಗೀಶ್ವರಪ್ಪರವರು ಮಾತನಾಡಿ ಕಾಲೇಜಿನ ಪರೀಕ್ಷಾ ಸಂದರ್ಭದಲ್ಲಿ ಕಾನೂನಿನ ರಕ್ಷಕರಾದ ಪೋಲೀಸರಿಗೆ

ಕಾಮನ್‌ಸೆನ್ಸ್ ಎಷ್ಟು ಅಗತ್ಯವಿದೆ ಎಂಬುದನ್ನು ಉದಾಹರಣೆ ಮೂಲಕ ತಿಳಿಸಿದರು, ರಾಜ್ಯಶಾಸ್ತ್ರ ಮುಖ್ಯಸ್ಥರಾದ ಪ್ರೋ॥ ಪರಶಿವ ಮೂರ್ತಿರವರು ವಂದಿಸಿದರು. ಈದೇ ಸಂಧರ್ಭದಲ್ಲಿ ರಾಜ್ಯ ಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಪಾವನ ಬಿ.ಎಸ್., ಸಂತೋಷಿ ಎಸ್ ಉಪಸ್ಥಿತರಿದ್ದರು.



ಕಾರ್ಯಾಗಾರಕ್ಕೆ ಆಗಮಿಸಿದ ಸಂಪನ್ಮೂಲ ವ್ಯಕ್ತಿಯನ್ನು
ಸ್ವಾಗತಿಸುತ್ತಿರುವುದು .



~~ಪ್ರಾಂಶ~~ ಪ್ರಾಂಶುಪಾಲರ ಕೊಠಡಿಗೆ ತೆರಳುತ್ತಿರುವ
ಸಂಪನ್ಮೂಲ ವ್ಯಕ್ತಿಗಳು .




ವೇದಿಕೆಯಲ್ಲಿ ಆಸೀನರಾಗಿರುವ ಪ್ರೊ. ರಮೇಶ ಬೆಳಗಿ, ಪ್ರೊ. ಚಂದ್ರಶೇಖರಯ್ಯ, ಡಾ. ಸಂದೀಪ್ ಶಾಸ್ತ್ರಿ, ಹಾಗು ಪ್ರೊ. ಪರಶಿವ ಮೂರ್ತಿ ರವರು.



ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಧ್ಯಾಪಕರು ಹಾಗು ವಿದ್ಯಾರ್ಥಿನಿಯರು.

## ಶೈಕ್ಷಣಿಕ ಕಾರ್ಯಾಗಾರದಲ್ಲಿ ಡಾ.ಸಂದೀಪ್ ಶಾಸ್ತ್ರಿ ಬೇಸರ

# ರಾಜಕೀಯ ಜ್ಞಾನವಿಲ್ಲದ ಯುವ ಪೀಳಿಗೆ

ಪ್ರಜಾವಾಣಿ ವಾರ್ತೆ

ತುಮಕೂರು: 'ಇಂದಿನ ಮಕ್ಕಳು ಕಲಾ ವಿಭಾಗವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಹಿಂಜರಿಯುತ್ತಿದ್ದಾರೆ. ಈ ಕಾರಣದಿಂದಲೇ ಯುವ ಪೀಳಿಗೆಯಲ್ಲಿ ರಾಜಕೀಯ ಜ್ಞಾನ ಕಡಿಮೆ ಇರುವುದನ್ನು ಕಾಣುತ್ತಿದ್ದೇವೆ' ಎಂದು ರಾಜಕೀಯ ವಿಶ್ಲೇಷಕ ಹಾಗೂ ಜೈನ್ ವಿಶ್ವವಿದ್ಯಾನಿಲಯದ ಸಹ ಕುಲಪತಿ ಡಾ.ಸಂದೀಪ್ ಶಾಸ್ತ್ರಿ ತಿಳಿಸಿದರು.

ಪದವಿ ಪೂರ್ವ ಕಾಲೇಜುಗಳ ರಾಜ್ಯಶಾಸ್ತ್ರ ಸಂಘ, ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಮಕ್ಕಳು ವಿಜ್ಞಾನ ಮತ್ತು ವಾಣಿಜ್ಯ ವಿಭಾಗವನ್ನೇ ಹೆಚ್ಚು ಆರಿಸಿಕೊಳ್ಳುತ್ತಿರುವುದರಿಂದಲೂ ಅವರಿಗೆ ರಾಜಕೀಯ ಜ್ಞಾನವಿಲ್ಲ ಎಂದು ತಿಳಿಸಿದರು.

ಒಂದೇ ದೇಶ, ಒಂದೇ ಚುನಾವಣೆ ಎಂಬ ವಿಷಯದ ಬಗ್ಗೆ ಎಲ್ಲಡೆ ವ್ಯಾಪಕ ಚರ್ಚೆ ಆಗುತ್ತಿದೆ. ಇದು ನಡೆದರೆ ಸುಮಾರು 59 ತಿಂಗಳ ಕಾಲ ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ತೊಡಕು ಉಂಟಾಗುವುದಿಲ್ಲ ಎಂಬ ವಾದವು ಅಲ್ಲಲ್ಲಿ ಕೇಳಿ ಬರುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಎಸ್.ನಾಗರತ್ನ, ಶಾಸಕ ಜಿ.ಬಿ.ಜ್ಯೋತಿಗಣೇಶ್, ಜಿಲ್ಲಾ ರಾಜ್ಯಶಾಸ್ತ್ರ ಸಂಘದ ಅಧ್ಯಕ್ಷ ಬಿ.ಯು. ಚಂದ್ರಶೇಖರಯ್ಯ ಮಾತನಾಡಿದರು.

ಕಾರ್ಯಾಗಾರದಲ್ಲಿ ಪ್ರಥಮ ಸ್ಥಾನ ಪಡೆದ ತಿಪಟೂರಿನ ಬಸವೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ರವಿಕುಮಾರ್ ಹಾಗೂ ನಿವೃತ್ತ ಉಪನ್ಯಾಸಕ ಗಂಗಣ್ಣ ಅವರನ್ನು ಸನ್ಮಾನಿಸಲಾಯಿತು.

ಸಂಘದ ಗೌರವಾಧ್ಯಕ್ಷ ರಮೇಶ್ ಆರ್.ಬೀಳಗಿ, ಪ್ರಾಂಶುಪಾಲ ಡಾ.ಡಿ.ಎನ್. ಯೋಗೀಶ್ವರಪ್ಪ, ಸಂಘದ ಕಾರ್ಯದರ್ಶಿ ಎಂ.ವಿ.ಅಜಯ್ ಕುಮಾರ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪರಶಿವಮೂರ್ತಿ, ಸಂಘದ ಮಾಜಿ ಅಧ್ಯಕ್ಷ ರಂಗಪ್ಪ, ಕಾರ್ಯಾಧ್ಯಕ್ಷ ಎಸ್.ಕುಮಾರಯ್ಯ, ಖಜಾಂಚಿ ಟಿ.ಜಿ. ಜ್ಯೋತಿಪ್ರಕಾಶ್, ಕಾವ್ಯಾ, ರಘು ಇದ್ದರು.



ಕಾರ್ಯಾಗಾರದಲ್ಲಿ 'ರಾಜ್ಯಶಾಸ್ತ್ರ ಮಾರ್ಗದರ್ಶಿ' ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು

# ಮತದಾನದಿಂದ ಅಕ್ಷರಸ್ಥರು ದೂರ

## ರಾಜಕೀಯ ವಿಶ್ಲೇಷಕ ಡಾ.ಸಂದೀಪ್‌ಶಾಸ್ತ್ರಿ ಅಸಮಾಧಾನ

■ ವಿಜಯವಾಣಿ ಸುದ್ದಿಜಾಲ ತುಮಕೂರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾವನೆಗಳು ರಾಜಕೀಯದ ಒಂದು ಭಾಗವಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ರಾಜಕೀಯ ವಿಶ್ಲೇಷಕ ಡಾ.ಸಂದೀಪ್‌ಶಾಸ್ತ್ರಿ ಅಭಿಪ್ರಾಯಪಟ್ಟರು.

ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ರಾಜ್ಯ ಪಿಯು ಕಾಲೇಜುಗಳ ರಾಜ್ಯಶಾಸ್ತ್ರ ಸಂಘ, ರಾಜ್ಯಶಾಸ್ತ್ರ ವಿಭಾಗದಿಂದ ಗುರುವಾರ ಆಯೋಜಿಸಿದ್ದ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಿಗೆ ಸನ್ಮಾನ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಅಭಿಪ್ರಾಯ ರೂಪಿಸುವ ಜವಾಬ್ದಾರಿಯನ್ನು ರಾಜಕೀಯ ಪಕ್ಷಗಳ ಮುಖಂಡರು, ಜನಪ್ರತಿನಿಧಿಗಳು ನಿಭಾಯಿಸಬೇಕು. ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆದರೆ, ಸುಮಾರು 59 ತಿಂಗಳು ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗುವುದಿಲ್ಲ ಎಂದರು.

ಸಮೀಕ್ಷೆಗಳು ಚುನಾವಣಾ ಸಂದರ್ಭದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಸಮೀಕ್ಷೆಗಳಿಂದ ಮಾತ್ರ ಜನರಲ್ಲಿನ ಮನಸ್ಥಿತಿ, ಅವಶ್ಯಕತೆ ತಿಳಿಯಲು ಸಾಧ್ಯ. ವಿಪರ್ಯಾಸವೆಂದರೆ ನಮ್ಮಲ್ಲಿ ಅಕ್ಷರಸ್ಥರು ಚುನಾವಣೆ ಸಮಯದಲ್ಲಿ ಮತಚಲಾವಣೆ ಮಾಡುವುದನ್ನು ಮರೆಯುತ್ತಿದ್ದಾರೆ ಎಂದು ಬೇಸರಿಸಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್ ಮಾತನಾಡಿ, ಕಂಪ್ಯೂಟರ್ ಯುಗದಲ್ಲಿ ಹಳೆಯ' ವಿಚಾರಗಳು ಕಣ್ಮರೆಯಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಸಂವಿಧಾನಗ ಅರಿವು ಮೂಡಿಸುವ ಕೆಲಸಗಳನ್ನು ರಾಜ್ಯಶಾಸ್ತ್ರ ಸಂಘ ಮಾಡುತ್ತಿದೆ ಎಂದರು.

ಡಿಡಿಪಿಯು ಎಸ್.ನಾಗರತ್ನಾ, ಜಿಲ್ಲಾ ರಾಜ್ಯಶಾಸ್ತ್ರ ಸಂಘದ ಅಧ್ಯಕ್ಷ ಬಿ.ಯು. ಚಂದ್ರಶೇಖರಯ್ಯ, ಕಾರ್ಯದರ್ಶಿ ಎಂ.ವಿ. ಅಜಯ್‌ಕುಮಾರ್, ಜಿಲ್ಲಾ ರಾಜ್ಯಶಾಸ್ತ್ರ ಸಂಘದ ಗೌರವಾಧ್ಯಕ್ಷ ರಮೇಶ್‌ಆರ್ ಬೀಳಗಿ, ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು ಪ್ರಾಚಾರ್ಯ ಡಿ.ಎನ್. ಯೋಗೀಶ್ವರಪ್ಪ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪರಶಿವಮೂರ್ತಿ ಇತರರಿದ್ದರು.

### ಇಬ್ಬರಿಗೆ ಸನ್ಮಾನ

ದ್ವಿತೀಯ ಪಿಯು ರಾಜ್ಯಶಾಸ್ತ್ರ ವಿಷಯದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದ ತಿಪಟೂರು ಬಸವೇಶ್ವರ ಪಿಯು ಕಾಲೇಜು ವಿದ್ಯಾರ್ಥಿ ರವಿಕುಮಾರ್, ನಿವೃತ್ತ ಉಪನ್ಯಾಸಕ ಗಂಗಣ್ಣ ಅವರನ್ನು ಸಂಘದಿಂದ ಸನ್ಮಾನಿಸಲಾಯಿತು.



ತುಮಕೂರಿನಲ್ಲಿ ರಾಜ್ಯ ಪಿಯು ಕಾಲೇಜುಗಳ ರಾಜ್ಯಶಾಸ್ತ್ರ ಸಂಘದಿಂದ ಗುರುವಾರ ಹಮ್ಮಿಕೊಂಡಿದ್ದ ಶೈಕ್ಷಣಿಕ ಕಾರ್ಯಾಗಾರಕ್ಕೆ ರಾಜಕೀಯ ವಿಶ್ಲೇಷಕ ಡಾ.ಸಂದೀಪ್‌ಶಾಸ್ತ್ರಿ ಚಾಲನೆ ನೀಡಿದರು.

### ಅಕ್ಷರಸ್ಥರು ಚುನಾವಣೆ ಸಮಯದಲ್ಲಿ ಮತಚಲಾವಣೆ ಮಾಡುವುದನ್ನು ಮರೆಯುತ್ತಿರುವುದು ನಮ್ಮ ದುರಂತ

# ಏಕಕಾಲದಲ್ಲಿ ಚುನಾವಣೆ ನಡೆಸಿ: ಡಾ.ಸಂದೀಪ್ ಶಾಸ್ತ್ರಿ ಸಲಹೆ



ತುಮಕೂರಿನ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಿಗೆ ಸನ್ಮಾನ ಸಮಾರಂಭದಲ್ಲಿ ಶಾಸಕ ಜಿ.ಬಿ. ಜ್ಯೋತಿಗಣೇಶ್ ಮಾತನಾಡಿದರು.

**ತುಮಕೂರು:** ಇಡೀ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆದರೆ, ಸುಮಾರು 59 ತಿಂಗಳ ಕಾಲ ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ತೊಡಕು ಉಂಟಾಗುವುದಿಲ್ಲ ಎಂದುರಾಜಕೀಯ ವಿಶ್ಲೇಷಕ ಹಾಗೂ ಜೈನ್ ವಿಶ್ವವಿದ್ಯಾನಿಲಯದ ಸಹ ಕುಲಪತಿ ಡಾ.ಸಂದೀಪ್ ಶಾಸ್ತ್ರಿ ತಿಳಿಸಿದರು.

ನಗರದ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜು ಆವರಣದ ಅಕ್ಕಮಹಾದೇವಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ರಾಜ್ಯಶಾಸ್ತ್ರ ಸಂಘದ ಜಿಲ್ಲಾ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಜ್ಯಶಾಸ್ತ್ರ ವಿಭಾಗ ಹಾಗೂ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಇವುಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

**ಸಮೀಕ್ಷೆಗಳ ಪಾತ್ರ ಪ್ರಮುಖ:** ಸಮೀಕ್ಷೆಗಳು ಚುನಾವಣಾ ಸಂದರ್ಭದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಸಮೀಕ್ಷೆಗಳಿಂದ ಮಾತ್ರ ಜನರಲ್ಲಿನ ಮನಸ್ಥಿತಿ, ಅವಶ್ಯಕತೆಗಳನ್ನು ತಿಳಿಯಲು ಸಾಧ್ಯ. ವಿಪರ್ಯಾಸವೆಂದರೆ ನಮ್ಮಲ್ಲಿ ಅಕ್ಷರಸ್ಥರು ಚುನಾವಣೆ ಸಮಯದಲ್ಲಿ ಮತಚಲಾವಣೆ ಮಾಡುವುದನ್ನು ಮರೆಯುತ್ತಿರುವುದು ನಮ್ಮ ದುರಂತ ಎಂದರು.

ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾವನೆಗಳು ರಾಜಕೀಯದ ಒಂದು ಭಾಗವಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು

ಇತ್ತೀಚಿನ ದಿನಗಳಲ್ಲಿ ಒಂದುದೇಶ, ಒಂದು ಚುನಾವಣೆ ಎಂಬ ವಿಷಯದ ಬಗ್ಗೆ ಎಲ್ಲೆಡೆ ವ್ಯಾಪಕ ಚರ್ಚೆಗಳು ಆಗುತ್ತಿವೆ ಎಂದು ಹೇಳಿದರು.

**ಕಲಾ ವಿಭಾಗದ ನಿರ್ಲಕ್ಷ್ಯ:** ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಕಲಾ ವಿಭಾಗವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಹಿಂಜರಿಯುತ್ತಿದ್ದಾರೆ. ಆದರೆ ಇತರೆ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಸಮಾಜ ವಿಜ್ಞಾನವನ್ನು ಅಭ್ಯಸಿಸುವಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಎಸ್.ನಾಗರತ್ನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರ್ತಿಸಿ ಅವರಿಗೆ ಅಭಿನಂದಿಸುವ ಮೂಲಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದ ನಗರ ಕ್ಷೇತ್ರದ ಶಾಸಕ ಜಿ.ಬಿ. ಜ್ಯೋತಿ ಗಣೇಶ್ ಇಂದಿನ ಕಂಪ್ಯೂಟರ್‌ಯುಗದಲ್ಲಿ ಸಾರ್ವಜನಿಕರಿಗೆ ಕಾನೂನು, ಸಂವಿಧಾನಗ ಬಗ್ಗೆ ಅರಿವು ಮೂಡಿಸುವಂತಹ ಕೆಲಸಗಳನ್ನು ರಾಜ್ಯಶಾಸ್ತ್ರ ಸಂಘ ಅನುಕರಣೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ರಾಜ್ಯಶಾಸ್ತ್ರ ಸಂಘದ ಅಧ್ಯಕ್ಷ ಬಿ.ಯು.ಚಂದ್ರಶೇಖರಯ್ಯ ಮಾತನಾಡಿ ಜಿಲ್ಲಾ ರಾಜ್ಯಶಾಸ್ತ್ರ ಸಂಘವು ಸುಮಾರು 24 ವರ್ಷಗಳಿಂದ ಸಕ್ರಿಯವಾಗಿ ಕೆಲಸ ಮಾಡುತ್ತಾ ಬಂದಿದ್ದು, ಕ್ರಿಯಾಶೀಲ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರನ್ನು ಗುರ್ತಿಸಿ, ಗೌರವಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಜಿಲ್ಲಾರಾಜ್ಯಶಾಸ್ತ್ರ ಸಂಘದ ಕಾರ್ಯದರ್ಶಿ ಎಂ.ವಿ. ಅಜಯ್‌ಕುಮಾರ್ ಮಾತನಾಡಿ ರಾಜ್ಯಶಾಸ್ತ್ರವನ್ನು ಉಳಿಸುವ ನಿಟ್ಟಿನಲ್ಲಿ ಸಂಘವು ರಾಜ್ಯಮಟ್ಟದ ಕಾರ್ಯಾಗಾರಗಳನ್ನೂ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲೆಗೇ ಮೊದಲನೇ ಸ್ಥಾನ ಪಡೆದ ತಿಪಟೂರಿನ ಬಸವೇಶ್ವರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ರವಿಕುಮಾರ್‌ಅವರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಅಲ್ಲದೆ ಇದೇ ವೇಳೆ, ತುರುವೇಕೆರೆಯ ನಿವೃತ್ತ ಉಪನ್ಯಾಸಕರಾದ ಗಂಗಣ್ಣ ಅವರನ್ನು ಸಹ ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾ ರಾಜ್ಯ ಶಾಸ್ತ್ರ ಸಂಘದ ಗೌರವಾಧ್ಯಕ್ಷ ರಮೇಶ್. ಆರ್ ಬೀಳಗಿ, ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಎನ್. ಯೋಗೀಶ್ವರಪ್ಪ, ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪರಶಿವಮೂರ್ತಿ, ಜಿಲ್ಲಾ ಸಂಘದ ಮಾಜಿ ಅಧ್ಯಕ್ಷ ರಂಗಪ್ಪ, ಸಂಘದಕಾರ್ಯಾಧ್ಯಕ್ಷ ಎಸ್. ಕುಮಾರಯ್ಯ, ಖಜಾಂಚಿ ಟಿ.ಜಿ.ಜ್ಯೋತಿಪ್ರಕಾಶ್ ಈ ಸಂದರ್ಭದಲ್ಲಿ ಹಾಜರಿದ್ದರು.

## ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜು, ತುಮಕೂರು-2.
## ರಾಜ್ಯಶಾಸ್ತ್ರ ವಿಭಾಗ – ಒಂದು ದಿನದ ಕಾರ್ಯಗಾರದ ವರದಿ
## ವಿಷಯ: "ಒಂದು ದೇಶ ಒಂದು ಚುನಾವಣೆ."

ಪ್ರಸುತ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾವನೆಗಳು ರಾಜಕೀಯದ ಒಂದು ಭಾಗವಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಇದನ್ನು ಅರ್ಥಮಾಡಿಕೊಂಡು ಇತ್ತೀಚೆಗೆ 'ಒಂದು ದೇಶ, ಒಂದು ಚುನಾವಣೆ' ಎಂಬ ವಿಷಯದ ಬಗ್ಗೆ ಎಲ್ಲೆಡೆ ವ್ಯಾಪಕ ಚರ್ಚೆಗಳು ಆಗುತ್ತಿವೆ. ಇದರ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ರಾಜ್ಯಶಾಸ್ತ್ರ ಸಮಘದ ಜಿಲ್ಲಾ ಶಾಲೆ, ಇವರ ಸಹಯೋಗದೊಂದಿಗೆ ರಾಜ್ಯಶಾಸ್ತ್ರ ವಿಭಾಗವು ಶೈಕ್ಷಣಿಕ ಕಾರ್ಯಗರ ಮತ್ತು ವಿಶೇಷ ಉಪನ್ಯಾಸವನ್ನು ದಿನಾಂಕ.02.08.2018ರ ಬೆಳಗ್ಗೆ 10.00ಗಂಟೆಗೆ ಹಮ್ಮಿಕೊಂಡಿತ್ತು. ಇದರ ಮುಖ್ಯ ಅತಿಥಿಗಳು ಮತ್ತು ವಿಶೇಷ ಉಪನ್ಯಾಸಕರಾದ ಡಾ.ಸಂದೀಪ್ ಶಾಸ್ತ್ರಿ ಸಹ ಕುಲಪತಿಗಳು, ಜೈನ್ ವಿಶ್ವವಿದ್ಯಾನಿಲಯ ಹಾಗೂ ಹೆಸರಾಂತ ರಾಜಕೀಯ ವಿಶ್ಲೇಷಕರು ಮಾತನಾಡುತ್ತಾ, 'ಒಂದು ದೇಶ ಒಂದೇ ಚುನಾವಣೆ' ಎಂಬ ವಿಷಯವನ್ನು ಕುರಿತು ಅನುಕೂಲ ಮತ್ತು ಅನಾನುಕೂಲತೆಗಳ ಬಗ್ಗೆ ವಿವರಿಸಿದರು..

ನಂತರ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಎಸ್.ನಾಗರತ್ನ ಹಾಗೂ ಶಾಸಕ ಜಿ.ಬಿ.ಜ್ಯೋತಿಗಣೇಶ್ ಸಹ ಸಮಾರಂಭವನ್ನು ಕುರಿತು ಮಾತನಾಡುತ್ತಾ, ಇಂದಿನ ಕಂಪ್ಯೂಟರ್ ಯುಗದಲ್ಲಿ ಹಳೆಯ ವಿಚಾರಗಳು ಕಣ್ಮರೆಯಾಗುತ್ತಿರುವ ದಿನಗಳಲ್ಲಿ ರಾಜ್ಯಶಾಸ್ತ್ರ ವಿಭಾಗದ ಈ ಕಾರ್ಯಕ್ರಮ ನಿಜಕ್ಕೂ ಸ್ವಾಗತಾರ್ಹ. ಸಾರ್ವಜನಿಕರಿಗೆ ಕಾನೂನು ಮತ್ತು ಸಂವಿಧಾನದ ಬಗ್ಗೆ ಅರಿವು ಮೂಡಿಸುವಂತಹ ಕೆಲಸಗಳನ್ನು ಹೆಚ್ಚೆಚ್ಚು ಮಾಡುವಂತೆ ಶುಭ ಕೋರಿದರು.

ಸಂಘದ ಕಾರ್ಯದರ್ಶಿ ಎಂ.ವಿ.ಅಜಯ್‌ಕುಮಾರ್, ಜಿಲ್ಲಾ ರಾಜ್ಯಶಾಸ್ತ್ರ ಸಂಘದ ಗೌರವಾಧ್ಯಕ್ಷ ರಮೇಶ್ ಆರ್.ಬೀಳಗಿ ಮತ್ತು ಕಾಲೇಜಿನ ಪ್ರಾಚಾರ್ಯರಾದ ಡಾ.ಡಿ.ಎನ್.ಯೋಗಿಶ್ವರಪ್ಪ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ಪರಶಿವಮೂರ್ತಿ ಮತ್ತು ಉಪನ್ಯಾಸಕಿ ಶ್ರೀಮತಿ ಬಿ.ಎಸ್.ಪಾವನ ಹಾಗೂ ಸುಮಾರು 85 ವಿಶೇಷ ಆಹ್ವಾನಿತರು, ವಿದ್ಯಾರ್ಥಿಗಳು ಸಹ ಉಪಸ್ಥಿತರಿದ್ದರು.

